


ಭೀಮ್ ಜನ್ಮಭೂಮಿ–
ಸ್ಮಾರಕದ ದೃಶ್ಯ




ಡಾ. ಅಂಬೇಡ್ಕರ್
ದೀಕ್ಷೆ ಪಡೆಯುತ್ತಿರುವ
ಸಂದರ್ಭದ ಪ್ರತಿಕೃತಿ



ಸ್ಮಾರಕದ ಒಳಗಿನ ದೃಶ್ಯ

ಮೇಜರ್ ಹುದ್ದೆಯವರೆಗೂ ತಲುಪಿ, 14 ವರ್ಷಗಳ ಕಾಲ ಮಿಲಿಟರಿ ಶಾಲೆಯಲ್ಲಿ ಮುಖ್ಯ ಬೋಧಕರಾಗಿದ್ದರು.

ರಾಮ್ಜಿ – ಭೀಮಾಬಾಯಿ ದಂಪತಿಗೆ 14ನೇ ಮತ್ತು ಕೊನೆಯ ಮಗುವಾಗಿ ಅಂಬೇಡ್ಕರ್ ಏಪ್ರಿಲ್ 14, 1891ರಂದು ಮಿಲಿಟರಿ ಕಂಟೋನ್ಮೆಂಟ್ 'ಮೋವ್'ನಲ್ಲಿ ಜನಿಸಿದರು. 1891ರಲ್ಲಿ, ಅಂದರೆ ಅಂಬೇಡ್ಕರ್ ಹುಟ್ಟಿದ ವರ್ಷವೇ 50 ರೂಪಾಯಿ ಪಿಂಚಣಿಯ ಮೇಲೆ ರಾಮ್ಜಿ ನಿವೃತ್ತಿ ಹೊಂದಿ ರತ್ನಗಿರಿ ಜಿಲ್ಲೆಯ ದಾಪೋಲಿಯಲ್ಲಿ ನೆಲೆಸಿದರು. 1894ರಲ್ಲಿ ರತ್ನಗಿರಿಯ ಲೋಕೋಪಯೋಗಿ ಇಲಾಖೆಯಲ್ಲಿ ಸ್ಟೋರ್ ಕೀಪರ್ ಆಗಿ ನೇಮಕಗೊಂಡರು. ನಂತರ ಅಲ್ಲಿಂದ ಸತಾರಾಕ್ಕೆ ವರ್ಗಗೊಂಡರು.

ಮಾಂಸ ಮತ್ತು ಮದ್ಯ ಎರಡನ್ನೂ ರಾಮ್ಜಿ ಮುಟ್ಟುತ್ತಿರಲಿಲ್ಲ. ಜ್ಯೋತಿಬಾ ಫುಲೆ ಕಟ್ಟಾ ಅಭಿಮಾನಿಯಾಗಿದ್ದ ಅವರು ಕಬೀರ್ ಭಕ್ತಿ ಪಂಥದ ಅನುಯಾಯಿಯಾಗಿದ್ದರು. ಆ ಕಾಲದಲ್ಲಿ ಮಿಲಿಟರಿ ಕಾಲೊನಿಗಳಲ್ಲಿದ್ದ ಎಲ್ಲಾ ಹೆಣ್ಣು–ಗಂಡು ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಬೇಕಾಗಿತ್ತು. ರಾಮ್ಜಿ ಮರಾಠಿ ಜೊತೆಗೆ ಇಂಗ್ಲಿಷ್ ಭಾಷೆಯಲ್ಲೂ ಒಳ್ಳೆಯ ಪ್ರೌಢಿಮೆ ಗಳಿಸಿಕೊಂಡಿದ್ದರು. ಬೀಜಗಣಿತ ಅವರ ಮೆಚ್ಚಿನ ವಿಷಯವಾಗಿತ್ತು. ರಾಮ್ಜಿ ಪ್ರತಿದಿನ ಮಕ್ಕಳಿಗೆ ಮನೆಯಲ್ಲೇ ಪಾಠ ಹೇಳಿಕೊಡುತ್ತಿದ್ದರು.

ಭೀಮರಾವ್ 5 ವರ್ಷಕ್ಕೆ ತನ್ನ ತಾಯಿಯನ್ನು ಕಳೆದುಕೊಂಡರು. ಭೀಮರಾವ್ ಸೋದರತ್ತೆ ಮೀರಾಬಾಯಿ, ಭೀಮನನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತ ತಾಯಿಯ ಸ್ಥಾನವನ್ನು ತುಂಬಿದರು. ಆಕೆ ಭೀಮನನ್ನು ಪ್ರೀತಿಯಿಂದ 'ಬ್ಲಿವಾ' ಎಂದು ಕರೆಯುತ್ತಿದ್ದರು. ಒಂದನೇ ತರಗತಿಯಲ್ಲಿ ಭೀಮನ ಹೆಸರು ಭೀಮರಾವ್ ರಾಮ್ಜಿ ಅಂಬೆವಾಡೇಕರ್ (ಊರು), ಉಪನಾಮ ಸಕ್ಪಾಲ್ ಆಗಿತ್ತು. ಶಾಲೆಯಲ್ಲಿ ದಾಖಲಾದಾಗ ನೋಂದಣಿ ಪುಸ್ತಕದಲ್ಲಿ ಭೀಮನ ಉದ್ದನೆ ಹೆಸರನ್ನು ಬರೆಯಲಾಗದೆ ಶಿಕ್ಷಕ, ಅಂಬೆವಾಡೇಕರ್ ಬದಲಿಗೆ ಅಂಬೇಡ್ಕರ್ ಎಂದು ಬರೆದರು ಎನ್ನಲಾಗಿದೆ.

ಅಂಬೇಡ್ಕರ್ ಅವರ ಬದುಕಿನ ಸಾಧನೆಯನ್ನು ಪರಿಚಯಿಸಿಕೊಳ್ಳಲೆಂದು ಸರ್ಕಾರ ಪಂಚ ತೀರ್ಥಸ್ಥಳಗಳನ್ನು ರೂಪಿಸಿದೆ. ಅವುಗಳೆಂದರೆ: ಜನ್ಮಭೂಮಿ (ಜನ್ಮಸ್ಥಳ), ಶಿಕ್ಷಾಭೂಮಿ (ಶಿಕ್ಷಣ ಪಡೆದ ಸ್ಥಳ), ದೀಕ್ಷಾಭೂಮಿ (ಬೌದ್ಧ ಧರ್ಮದ ದೀಕ್ಷೆ ಪಡೆದ ಸ್ಥಳ), ಮಹಾಪರಿನಿರ್ವಾಣ ಭೂಮಿ (ಮರಣದ ಸ್ಥಳ), ಚೈತ್ಯಭೂಮಿ (ಅಂತಿಮಸಂಸ್ಕಾರ ನಡೆದ ಸ್ಥಳ).

ಅಂಬೇಡ್ಕರ್ ಅವರ ಬರವಣಿಗೆ ಮತ್ತು ಚಿಂತನೆಯ ಓದುವಿಕೆ ಈಗಿನ ಕಾಲಕ್ಕೆ ಅತ್ಯಗತ್ಯವಾಗಿದೆ. ಸಾಮಾಜಿಕ ಸಮಾನತೆ, ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಡಿದ ಮಹಾನ್ ಭಾರತೀಯ ನಾಯಕ, ಸಂವಿಧಾನ ಶಿಲ್ಪಿ ಅವರ ಜೀವನವನ್ನು ರೂಪಿಸಿದ ವಿವಿಧ ಸ್ಥಳಗಳ ಪರಿಚಯ ಕೂಡ ಅವರನ್ನು ಅರಿಯಲು ಮತ್ತು ನಮ್ಮ ಆತ್ಮಶೋಧನೆಗೆ ಅನಿವಾರ್ಯವಾಗಿದೆ.

ಪ್ರತಿಕ್ರಿಯಿಸಿ: feedback@sudha.co.in